473(451) ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ.ಇ.ಟಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಸಿ.ಇ.ಟಿ. ಕೌನ್ಸಿಲಿಂಗ್ ಪ್ರಾರಂಭಿಸಲಾಗಿದೆಯೇ;

ಇ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಈ) ಸಿ.ಇ.ಟಿ. ಮೂಲಕ ವೃತ್ತಿ ಶಿಕ್ಷಣ ಪ್ರವೇಶಕ್ಕೆ ಲಭ್ಯವಿರತಕ್ಕ ಸೀಟುಗಳೆಷ್ಟು;

ಉ) ಕಾಮೆಡ್–ಕೆ ಹಾಗೂ ಸರ್ಕಾರದ ನಡುವೆ ಸೀಟುಗಳ ಹೊಂದಾಣಿಕೆಗೆ ಸಂಬಂಧಪಟ್ಟಂತೆ ಇರತಕ್ಕ ಬಿಕ್ಕಟ್ಟನ್ನು ನಿವಾರಿಸಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 2004–05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ.ಇ.ಟಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 92,912.

ಆ) ಪ್ರಾರಂಭಿಸಲಾಗಿತ್ತು. ಆದರೆ, ದಿನಾಂಕ: 15:07:2004ರಂದು ಸರ್ವೋಚ್ಚ ನ್ಯಾಯಾಲಯವು ಸೀಟು ಹಂಚಿಕೆ ಅನುಪಾತದಲ್ಲಿ ನೀಡಿರುವ ಮಧ್ಯಂತರ ತೀರ್ಪಿನಿಂದ ಉಂಟಾದ ಗೊಂದಲದಿಂದ ಸದ್ಯಕ್ಕೆ ಕೌನ್ಸಿಲಿಂಗ್ ನಿಲ್ಲಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಈ ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ.

ಉ) ಅಧಿಕಾರಿಗಳ ಸಮಿತಿಯು ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ. ಸಚಿವ ಸಂಪುಟ ಉಪ ಸಮಿತಿಯೂ ಸಹ ಹಲವು ಬಾರಿ ಸಭೆ ಸೇರಿ ಸಮಸ್ಯೆ ನಿವಾರಣೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಗಳ ಪ್ರತಿನಿಧಿಗಳೊಂದಿಗೆ ಮೂರು ಭಾರಿ ಸಭೆ ನಡೆಸಲಾಗಿದೆ. ಸಮಸ್ಯೆಯ ನಿವಾರಣೆಗೋಸ್ಕರ 2004–05ನೇ ಸಾಲಿಗೆ ಪ್ರವೇಶಾತಿ ಬಗ್ಗೆ ಶಾಸನ ತರಲಾಗುತ್ತಿದೆ.

475(825) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆಯಲ್ಲಿ ಇರುವ ವಕ್ಫ್ ಆಸ್ತಿಗಳು ಯಾವವು?

ಆ) ಈ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕಳೆದ 3 ವರ್ಷಗಳಿಂದ ಈ ಬಾಬ್ತಿಗಾಗಿ ಎಷ್ಟು ಹಣವನ್ನು ವ್ಯಯ ಮಾಡಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) ತುರುವೇಕೆರೆ ಹಾಗೂ ತುರುವೇಕೆರೆ ಗ್ರಾಮ ಪ್ರದೇಶಗಳಲ್ಲಿ ಮಸೀದಿಗಳು ದರ್ಗಾ, ಈದ್ಗಾ ಖಬ್ರಸ್ಥಾನ ಇತರೆ ಒಟ್ಟು 37 ವಕ್ಫ್ ಆಸ್ತಿಗಳಿವೆ.

(ಅನುಬಂಧ–I)

ಆ) ಸದರಿ ಆಸ್ತಿಯಿಂದ ಬರುವ ಆದಾಯದಿಂದ ಸದರಿ ಆಸ್ತಿಗಳನ್ನು ಸುರಕ್ಷತೆ ಹಾಗೂ ಅಭಿವೃದ್ಧಿಪಡಿಸಲು ಅಲ್ಲದೆ ಅಗತ್ಯವಿರುವ ಆಸ್ತಿಗಳ ದುರಸ್ತಿ, ಸುರಕ್ಷತೆ ಹಾಗೂ ನಿರ್ವಹಣೆಗಾಗಿ ಸರ್ಕಾರದಿಂದ ಅನುದಾನ ಸಹ ನೀಡಲಾಗುತ್ತಿದೆ.

ಇ) ತುರುವೇಕೆರೆ ಹಾಗೂ ಅದರ ಗ್ರಾಮಾಂತರ ಪ್ರದೇಶಗಳಲ್ಲಿ ವಕ್ಫ್ ಆಸ್ತಿಗಳ ನಿರ್ಮಾಣ, ದುರಸ್ತಿ, ಸುರಕ್ಷತೆಗಾಗಿ ಕಳೆದ 3 ವರ್ಷಗಳಿಂದ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

ವರ್ಷ	ಹಣ ಪಡೆದ ವಕ್ಫ್	ಮೊತ್ತ
2001–02	06	ರೂ.2,10,000
2002–03	06	ರೂ.1,45,000
2002–04	02	ರೂ. 50,000
ಒಟ್ಟು	14	ರೂ.4,05,000

ANNEXURE-I

Statement showing the details of Wakf Institutions of Turuvekere Taluk, Tumkur Dist.

I. Mosques

1. Jamia Masjid,Banasandra, Turuvekere Tq.
2. Jamia Masjid, Mayasandra "
3. Jumma Masjid, Thandga, "
4. Jumma Masjid, Dasihalli "
5. Jumma Masjid, Beechanahally "
6. Jumma Masjid, Nagalapura "
7. Jumma Masjid, Devamaualamajalli "
8. Jumma Masjid, Chandur "
9. Jumma Masjid, Doddamma Village "
10. Noorani Masjid, Sampigehosahalli, Turuvekere Tq.
11. Macca Masjid, Turuvekere "
12. Jumma Masjid, Dabbeghata "
13. Madeena Masjid, Janatha Colony, Turuvekere.
14. Mosque (Sunni), Rahamansab Palya, T.kere Tq.
15. Sunnehri Masjid, Akkalsandra, Turuvekere Tq.
16. Jamia Masjid, Muslim Colony, Talakere.
17. Bilal Masjid, Marthamannahalli, Turuvekere Tq.
18. Dargaj & Mohalla Masjid, Hattihalli, Turuvekere Tq.
19. Jamia Masjid, Kalkere, Turuvekere Tq.

II. DARGHs

1. Noorulla Shah, Dargah, Turuvekere
2. Hayath Sab Dargah, Nagalapura, Turuvekere Tq.

3. Ashurkhana Sunni, Turuvekere
4. Ashurkhana Sunni Mayasandra, Turuvekere Tq.
5. Ashurkhana Sunni, aga Devanayakanahalli, Turuvekere Tq.
6. Ashurkhana Sunni, Chandur

III. IDGAHS

1. Idgah, (Sunni), Bannasandra, Turuvekere Tq.
2. Idgah, (Sunni), Turuvekere Tq.
3. Idgah, (Sunni), Mayasandra, Turuvekere Tq.
4. Idgah, & Khabrasthan, Thandga;
5. Idgah, (Sunni), Dasihalli,
6. Idgah, (Sunni), Beechanahally,
7. Idgah, (Sunni), Devanayakanahalli,
8. Idgah, (Sunni), Doddamaligere

IV. KHABRASTHANS

1. Khabrasthan, Mayasandra,
2. Khabrasthan, Dasihalli
3. Khabrasthan, Nagalapura,
4. Khabrasthan, Talakere

Total: 37 Wakf Institutions

476(748) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಳೆದ 3 ವರ್ಷಗಳಿಂದ ಯಾವ ಪ್ರಮಾಣದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿವೆ (ವರ್ಷವಾರು ಹಾಗೂ ವರ್ಗವಾರು ಮಾಹಿತಿಒದಗಿಸುವುದು);

ಇ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಪಶುಸಂಪತ್ತಿನ ಸಂಖ್ಯೆ ಎಷ್ಟು (ವರ್ಗವಾರು ಮಾಹಿತಿನೀಡುವುದು);

ಈ) ಪಶುಗಣತಿಯನ್ನು ಎಷ್ಟು ವರ್ಷಗಳಿಗೊಮ್ಮೆ ಮಾಡಲಾಗುತ್ತದೆ;

ಉ) ರಾಜ್ಯದಲ್ಲಿ ಪಶು ಸಂಪತ್ತನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರ ಹಾಕಿ ಕೊಂಡಿರುವ ಕಾರ್ಯಕ್ರಮಗಳೇನು;

ಊ) ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವ ಯಾವ ಭಾಗದಲ್ಲಿ ಜಾನುವಾರುಗಳು ರೋಗಕ್ಕೆ ಗುರಿಯಾಗಿದ್ದವು;

ಋ) ಯಾವ ಯಾವ ರೋಗದಿಂದ ಎಷ್ಟು ಜಾನುವಾರುಗಳು ಸತ್ತಿವೆ (ವರ್ಗವಾರು ಮಾಹಿತಿ ನೀಡುವುದು);